# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.3/2020**

| | | |
|---|---|---|
| ಹೆಸರು | : ಶ್ರೀಮತಿ ಗೌರಮ್ಮ ಮಂಟೂರ | ಫ್ರಾಸಾ-32 |
| ತಂದೆಯ ಹೆಸರು | : ರಂಗಪ್ಪ | ಚಾಸಾ-100 |
| ವಯಸ್ಸು | : 38 ವರ್ಷ | |
| ಉದ್ಯೋಗ | : ಮಹಿಳಾ ಪೇದೆ-1489, ಲೋಕಾಪೂರ ಪೊಲೀಸ ಠಾಣೆ | |
| ವಿಳಾಸ | : ಲೋಕಾಪೂರ | |

ದಿಃ 07.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

2014 ರಿಂದ 2021 ರವರೆಗೆ ನಾನು ಮುಧೋಳ ಪೊಲೀಸ ಠಾಣೆಯಲ್ಲಿ ಮಹಿಳಾ ಪೇದೆ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 15.10.2019 ರಂದು ಮಧ್ಯಾಹ್ನ 3.00 ರಿಂದ ರಾತ್ರಿ 9.00 ರವರೆಗೆ ಸದರಿ ಠಾಣೆಯಲ್ಲಿ ಸೆಂಟ್ರಿ ಕೆಲಸದಲ್ಲಿ ಇದ್ದೆ. ಆಗ ಯಲ್ಲಪ್ಪ ತಳಗೇರಿ ಹಾಗೂ ಕುಟುಂಬದವರು 4-5 ಜನ ಹೊರಗೆ ಇದ್ದರು ಆ ಕುರಿತು ಎಸ್.ಹೆಚ್.ಓ ರವರಿಗೆ ಮಾಹಿತಿ ತಿಳಿಸಿದ್ದೆ. ಸುಮಾರು 4.30 ರ ವೇಳೆಗೆ ಠಾಣೆಯಲ್ಲಿ ಎಸ್.ಹೆಚ್.ಓ ರವರು 7-8 ಜನರನ್ನು ಪಿ.ಎಸ್.ಐ ರವರ ಚೇಂಬರನಲ್ಲಿ ಕುಳ್ಳಿರಿಸಿದ್ದರು. ಇವುಗಳನ್ನು ನಾನು ಕಣ್ಣಾರೆ ಕಂಡಿದ್ದೇನೆ. 4.30 ರ ವೇಳೆಗೆ ಶಿರೋಳದಲ್ಲಿ ಕೊಲೆಯಾಗಿದೆ ಎನ್ನುವ ವಿಚಾರ ಎಸ್.ಹೆಚ್.ಓಗೆ ತಿಳಿದಂತೆ ನನಗೆ ತಿಳಿಸಿದರು. ಆ ನಂತರ ಎಸ್.ಹೆಚ್.ಓ ರವರು ಪಂಚಾಯಿತ ಹಾಗೂ ಹೋಟೇಲನಲ್ಲಿ ಇದ್ದ 7-8 ಜನರನ್ನು ಠಾಣೆಯಲ್ಲಿ ಕುಳ್ಳಿರಿಸಿದರು. ಆ ನಂತರ ಮೃತನ ಜನರು ಠಾಣೆಯಿಂದ ಹೊರಟು ಹೋದರು. ನಾನು ಈ ಕುರಿತು ತನಿಖಾಧಿಕಾರಿಗೆ ಹೇಳಿಕೆ ದಿಃ 26.11.2019 ರಂದು ಕೊಟ್ಟಿದ್ದೇನೆ.

## ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ

ನನ್ನ ಎಸ್.ಹೆಚ್.ಓ ಯಾರನ್ನು ಎಲ್ಲಿಗೂ ಕಳಿಸಿಲ್ಲ. ನಾನು ಕಂಡ ವಿಚಾರವನ್ನು ಎಸ್.ಹೆಚ್.ಓ ರವರಿಗೆ ತಿಳಿಸಿದ ವಿಚಾರವನ್ನು ಯಾರಿಗಾದರೂ ಹೇಳಿದ್ದೇನಾ ಎಂದರೆ

ಪಿ.ಎಸ್.ಐ ರವರಿಗೆ ಹೇಳಿದ್ದೇನೆ. ನಾನು ಹೇಳುವಂತೆ ತಳಗೇರಿ ಕುಟುಂಬ ಅಂದು ನಾನು ನೋಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಎಸ್.ಹೆಚ್.ಓ ರವರು ನನಗೆ ಯಾವುದೇ ಮಾಹಿತಿ ನೀಡುವ ಪ್ರಸಂಗ ಇಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿ ಮುಂದೆ ಹೇಳಿಕೆ ಕೊಟ್ಟಿಲ್ಲ, ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಇಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

<u>ನಾಲ್ಕನೇ ಹೆಚ್ಚುವರಿ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ**</u>

<u>**ನ್ಯಾಯಾಲಯ, ಬಾಗಲಕೋಟೆ**</u>

<u>**Spl.Case No.3/2020**</u>

| | | | |
|---|---|---|---|
| ಹೆಸರು | : | ವೀರಪ್ಪ ತೇಲಿ | ಫ್ರಾಸಾ-31 |
| ತಂದೆಯ ಹೆಸರು | : | ಬಸಪ್ಪ | ಚಾಸಾ-99 |
| ವಯಸ್ಸು | : | 45 ವರ್ಷ | |
| ಉದ್ಯೋಗ | : | ಮುಖ್ಯಪೇದೆ-1399, ಮಹಾಲಿಂಗಪೂರ ಪೊಲೀಸ ಠಾಣೆ | |
| ವಿಳಾಸ | : | ಮಹಾಲಿಂಗಪೂರ | |

ದಿಃ 07.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

2015 ರಿಂದ 2022 ರವರೆಗೆ ನಾನು ಮುಧೋಳ ಪೊಲೀಸ ಠಾಣೆಯಲ್ಲಿ ಮುಖ್ಯಪೇದೆ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 15.10.2019 ರಂದು ಮಧ್ಯಾಹ್ನ 2.00 ರಿಂದ ರಾತ್ರಿ 8.00 ಗಂಟೆಗೆಯವರೆಗೆ 2 ನೇ ಪಾಳೆದಲ್ಲಿ ಎಸ್.ಹೆಚ್.ಓ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಸದರಿ ದಿನ 2.30 ರ ವೇಳೆಗೆ ಯಲ್ಲಪ್ಪ ತಳಗೇರಿ, ಮಹಾಂತೇಶ, ಅವರ ತಾಯಿ ಸತ್ಯವ್ವ ನನ್ನನ್ನು ಠಾಣೆಯಲ್ಲಿ ಭೇಟಿ ಮಾಡಿದರು. ಸದರಿ ಯಲ್ಲಪ್ಪ ನನಗೆ ನನ್ನ ಹಿಂದೆ ಕರ್ತವ್ಯದಲ್ಲಿ ಇದ್ದ ಅಧಿಕಾರಿ ಪಿ.ಎಸ್.ಐ ರವರನ್ನು ಭೇಟಿ ಮಾಡಿಸಿದ್ದರು ಎಂದು ತಿಳಿಸಿದ್ದ. ಪುನಃ ಸದರಿ ಯಲ್ಲಪ್ಪ 3.30 ರ ವೇಳೆಗೆ ಠಾಣೆಯ ಒಳಗೆ ಬಂದು ಡಿ.ವಾಯ್.ಎಸ್.ಪಿ ಬರುತ್ತಾರೆ ಅಲ್ಲಿಯವರೆಗೆ ಕಾಯಬೇಕು ಎಂದು ಪಿ.ಎಸ್.ಐ ತಿಳಿಸಿದ್ದರು ಎಂದು ಹೇಳಿದ್ದ. ಸುಮಾರು 3.45 ರ ವೇಳೆಗೆ ಹನಮಂತಗೌಡ ಬಿರಾದಾರ ಪಾಟೀಲ, ಸಂಗಪ್ಪ ನಾಗರಡ್ಡಿ, ಅಶೋಕ ಪಡಸಲಗಿ, ಮಹೇಶ ನಾಗರಡ್ಡಿ, ಗಿರಿಮಲ್ಲಯ್ಯ ಗಣಾಚಾರಿ, ಮಲ್ಲಪ್ಪ ಗಣಿ, ಈರಪ್ಪಣ್ಣಪ್ಪ ಹೊಸೂರ ಹಾಗೂ ಇತರರು ಒಂದು ಕಾರ ಹಾಗೂ ಕ್ರೂಜರನಲ್ಲಿ ಬಂದು ತಾಲೂಕು ಪಂಚಾಯತ ಆವರಣದಲ್ಲಿ ಠಾಣೆಯ ಮುಂದೆ ಹಾಯ್ದು ಕುಳಿತ್ತಿದ್ದರು. ಹನಮಂತ ನಬಾಬ 4.15 ಕ್ಕೆ ಠಾಣೆಗೆ ಬಂದು ಹಾಗೆ ಫೋನ್‌ನಲ್ಲಿ ಮಾಡನಾಡುತ್ತಾ ಹೋಗಿಬಿಟ್ಟ. ಯಲ್ಲಪ್ಪನ ಕಡೆಯವರು ಚಹಾ

ಕುಡಿಯಲು 4.50 ರ ವೇಳೆಗೆ ಹೋದವರು ಬಾಯಿ ಮಾಡುತ್ತಿದ್ದರು, ಚೀರುತ್ತಿದ್ದರು. ಅವರೆಲ್ಲರೂ ಅಳುತ್ತಾ ಹೊರಟು ಹೋದರು. ಆಗ ನಮ್ಮ ಠಾಣಾ ಸಿಬ್ಬಂದಿ ವಾಲೀಕರ ತಿಳಿಸಿದ್ದಂತೆ ಜೋಡಿ ಕೊಲೆ ಶಿರೋಳ ಗ್ರಾಮದಲ್ಲಿ ಆಗಿದೆ ಎಂದು ಹೇಳಿದ್ದ. ಆ ವಿಷಯವನ್ನು ಪಿ.ಎಸ್.ಐ ರವರಿಗೆ ಮಾಹಿತಿ ರವಾನಿಸಿದ್ದೇನೆ. ತಾಲೂಕು ಪಂಚಾಯಿತ ಆವರಣದಲ್ಲಿದ್ದ ವ್ಯಕ್ತಿಗಳನ್ನು ಪೊಲೀಸ ಠಾಣೆಯ ಒಳಗೆ ನಾನು ಕರೆಸಿ ಕುಳ್ಳಿಸಿರಿದ್ದು ಇದೆ. ನಾನು ಈ ಕುರಿತು ತನಿಖಾಧಿಕಾರಿ ಕೇಳಿದಾಗ ದಿಃ 26.11.2019 ರಂದು ಇದೇ ವಿಚಾರವನ್ನು ತಿಳಿಸಿದ್ದೇನೆ. ಸಿಸಿಟಿವಿ ಫ್ಯೂಟೇಜನಲ್ಲಿ ನಾನು ಕರ್ತವ್ಯ ಮಾಡುತ್ತಿರುವುದು ಕಂಡುಬರುತ್ತದೆ.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ಯಲ್ಲಪ್ಪ, ಸತ್ಯವ್ವ ಹಾಗೂ ಮಹಾಂತೇಶ ಠಾಣೆಗೆ ಬಂದಿದ್ದರು ಎಂದು ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ-103 ನನಗೆ ಜೋಡಿ ಕೊಲೆಯಾದ ಬಗ್ಗೆ ತಿಳಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಜೋಡಿ ಕೊಲೆಯ ಬಗ್ಗೆ ಗೊತ್ತಾಯಿತು ಎಂದಂತೆ ಎಸ್.ಹೆಚ್.ಓ ನಾನು ಇದ್ದೇನೆ ಎಂದು ಹೇಳಿದ್ದಂತೆ ನಿಯಮಾನುಸಾರ ಏನೇನು ಕ್ರಮ ವಹಿಸಿದ್ದೇನೆ ಎಂದರೆ ಸಾಕ್ಷಿ ನಾನು ಮೇಲಾಧಿಕಾರಿಗೆ ದೂರವಾಣಿ ಮುಖಾಂತರ ಹಾಗೂ ವೈಯರ್ ಲೈಸ ಮುಖೇನ ತಿಳಿಸಿದ್ದೇನೆ. ನಾನು ಸಿಬ್ಬಂದಿಯನ್ನು ಸ್ಥಳಕ್ಕೆ ಕೂಡಲೇ ನಿಯೋಜನೆ ಮಾಡಿದ್ದೇನಾ ಎಂದರೆ ಸಾಕ್ಷಿ ನಾನು ಮಾಡಿಲ್ಲ ಪಿ.ಎಸ್.ಐ ರವರೇ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಧಾವಿಸಿದ್ದರು. ನಾನು ಯಾವುದೇ ವಿಷಯವನ್ನು ಮೇಲಾಧಿಕಾರಿಗೆ ನಿಯಮಾನುಸಾರ ತಿಳಿಸೇ ಇಲ್ಲ ಎಂದರೆ ಸರಿಯಲ್ಲ.

ಮರು ಸವಾಲು ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.

# ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಶೇಷ ನ್ಯಾಯಾಲಯ, ಬಾಗಲಕೋಟೆ

**Spl.Case No.3/2020**

| | | | |
|---|---|---|---|
| ಹೆಸರು | : | ಜಯಶ್ರೀ ವಾಜಂತ್ರಿ | ಪ್ರಾಸಾ-30 |
| ತಂದೆಯ ಹೆಸರು | : | ಗಿರಿಮಲ್ಲಪ್ಪ | ಚಾಸಾ-96 |
| ವಯಸ್ಸು | : | 48 ವರ್ಷ | |
| ಉದ್ಯೋಗ | : | ಮಹಿಳಾ ಮುಖ್ಯಪೇದೆ-1424, ಮುಧೋಳ ಪೊಲೀಸ ಠಾಣೆ | |
| ವಿಳಾಸ | : | ಮುಧೋಳ | |

ದಿಃ 07.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

2017 ರಿಂದ ಇಲ್ಲಿಯವರಿಗೆ ನಾನು ಮುಧೋಳ ಪೊಲೀಸ ಠಾಣೆಯಲ್ಲಿ ಮುಖ್ಯಪೇದೆ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಾ ಇದ್ದೇನೆ.

ದಿನಾಂಕಃ 15.10.2019 ರಂದು ಬೆಳಿಗ್ಗೆ 08.00 ರಿಂದ ಮಧ್ಯಾಹ್ನ 2.00 ಗಂಟೆಗೆಯವರಿಗೆ 1 ನೇ ಪಾಳೆದಲ್ಲಿ ಠಾಣಾಧಿಕಾರಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಯಲ್ಲಪ್ಪ ತಳಗೇರಿ ಹಾಗೂ ಆತನೊಂದಿಗೆ ಒಬ್ಬ ಮಹಿಳೆ ಮತ್ತು ಇನ್ನು ಮೂರು ಜನ ಗಂಡಸರು ಠಾಣೆಗೆ ಬಂದಿದ್ದರು. ನಾನು ಕರ್ತವ್ಯದಲ್ಲಿ ಇದ್ದಂತೆ ಅವರನ್ನು ಠಾಣೆಗೆ ಬಂದಿರುವ ಕಾರಣ ಕೇಳಿದ್ದೆ ಅವರು ನನಗೆ ಯಾವುದೇ ಉತ್ತರ ಕೊಡದೇ ಠಾಣಾಧಿಕಾರಿ ಭೇಟಿ ಮಾಡಲು ಒಳಗೆ ಹೋಗಿದ್ದರು. ಠಾಣಾಧಿಕಾರಿ ಬಳಿ ಮಾತನಾಡಿದ ಮೇಲೆ ಅವರು ಠಾಣೆಯ ಆವರಣದಲ್ಲಿ ಪಕ್ಕದಲ್ಲಿ ನಿಂತಿದ್ದರು. ಯಲ್ಲಪ್ಪ ಆತನ ಜೊತೆಗೆ ಆತನ ತಾಯಿ ಇದ್ದಳು. ಈ ಕುರಿತು ತನಿಖಾಧಿಕಾರಿ ನನ್ನನ್ನು ದಿನಾಂಕಃ 26.11.2019 ರಲ್ಲಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

**ಪಾಟೀ ಸವಾಲುಃ ಶ್ರೀ.ಎಸ್.ಸಿ.ಹೆಚ್. ವಕೀಲರಿಂದ ಆರೋಪಿ ಪರ**

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಮಾರು 1.00 ಗಂಟೆ ವೇಳೆಗೆ ಯಲ್ಲಪ್ಪ ತಳಗೇರಿ ಆತನ ತಾಯಿ ಹಾಗೂ ಇನ್ನು ಮೂರು ಜನ ಠಾಣೆಗೆ ಬಂದಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ಸವಾಲು ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಶೇಷ ನ್ಯಾಯಾಧೀಶರು, ಬಾಗಲಕೋಟೆ.